# ಆನಂದ ಕೋ–ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ, ನಂ.116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020
www.acobl.com email: anandacb_1979@yahoo.com, headoffice@acobl.com
✆ ಪ್ರ.ಕ.: 2344 7829, ಬಸವೇಶ್ವರನಗರ: 2350 1843, ಹೆಚ್.ಬಿ.ಆರ್. 2365 8484 ಶೇಷಾದ್ರಿಪುರಂ: 2346 8214

ಸ್ಥಾಪನೆ: 1979

## 45ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾಪತ್ರ

ಮಾನ್ಯ ಸದಸ್ಯರೇ,

ದಿನಾಂಕ 06–09–2026ನೇ ಭಾನುವಾರದಂದು ಬೆಳಿಗ್ಗೆ 10–00 ಘಂಟೆಗೆ ಸರಿಯಾಗಿ 2025–26ರ 45ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ವಿನಂತಿ.

ಅಧ್ಯಕ್ಷತೆ : **ಶ್ರೀ ಸಿ. ದೊಡ್ಡೀರಯ್ಯ**, ಅಧ್ಯಕ್ಷರು

ಸ್ಥಳ : **ಶ್ರೀ. ಆದಿಚುಂಚನಗಿರಿ ಸಮುದಾಯ ಭವನ**, ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ
ವಿಜಯನಗರ, ಬೆಂಗಳೂರು – 560 040

## ವಿಷಯಗಳು

1. ಪ್ರಾರ್ಥನೆ
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
3. ಅಧ್ಯಕ್ಷರಿಂದ ಸ್ವಾಗತ ಭಾಷಣ.
4. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವುದು.
5. 2025–26ನೇ ಸಾಲಿನ 45ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
6. ದಿನಾಂಕ 07–09–2025 ರಂದು ನಡೆದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಗಳನ್ನು ಓದಿ ಧೃಡೀಕರಿಸುವುದು.
7. 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.
8. 2025–2026ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಹಾಗೂ ಲೆಕ್ಕ ಪರಿಶೋಧಕರ ವರದಿಗೆ ಆಡಳಿತ ಮಂಡಲಿಯು ಕೊಟ್ಟಿರುವ ಸಮಜಾಯಿಷಿಗಳನ್ನು ಅಂಗೀಕರಿಸುವುದು.
9. 2025–26ನೇ ಸಾಲಿನ ಲಾಭದ ವಿಂಗಡಣೆ ಹಾಗೂ ವಿತರಣೆಯನ್ನು ಅಂಗೀಕರಿಸುವುದು.
10. 2026–27ನೇ ಸಾಲಿಗೆ ಆಡಳಿತ ಮಂಡಲಿ ಮಂಡಿಸಿರುವ ಅಂದಾಜು ಆಯ–ವ್ಯಯಗಳನ್ನು ಅಂಗೀಕರಿಸುವುದು ಮತ್ತು 2025–2026ನೇ ಸಾಲಿನ ಅಂದಾಜಿಗಿಂತ ಹೆಚ್ಚುವರಿಯಾಗಿರುವ ಖರ್ಚುಗಳನ್ನು ಅಂಗೀಕರಿಸುವುದು.
11. 2025–26ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿದ ಲೆಕ್ಕಪರಿಶೋಧಕರ ನೇಮಕವನ್ನು ಅನುಮೋದಿಸುವುದು ಮತ್ತು 2026–27ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು.
12. ಬೈಲಾ ತಿದ್ದುಪಡಿಯ ಬಗ್ಗೆ.
13. ಸದಸ್ಯರಿಂದ ಬಂದ ಸಲಹೆಗಳು ಮತ್ತು ವಿಷಯಗಳ ಪರಿಶೀಲನೆ.
14. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸ ಬಹುದಾದ ಇತರ ವಿಷಯಗಳು.
15. ವಂದನಾರ್ಪಣೆ.

ಸ್ಥಳ: ಬೆಂಗಳೂರು
ದಿನಾಂಕ: 08–08–2026

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
**ಕೆ. ಜನಾರ್ಧನ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ವಿಶೇಷ ಸೂಚನೆ

1. 2025–26ನೇ ಸಾಲಿನ ಎಸ್.ಎಸ್.ಎಲ್.ಸಿ. State & CBSE Syllabus (ಶೇ 95% ಮತ್ತು ಅದಕ್ಕಿಂತ ಹೆಚ್ಚು), SSLC ICSE Syllabus (ಶೇ 80% ಮತ್ತು ಅದಕ್ಕಿಂತ ಹೆಚ್ಚು), 2ನೇ ಪಿ.ಯು.ಸಿ. ಪರೀಕ್ಷೆಯಲ್ಲಿ (ಶೇ 80% ಮತ್ತು ಅದಕ್ಕಿಂತ ಹೆಚ್ಚು) ಡಿಪ್ಲೊಮ ಮತ್ತು ಪದವಿ (ಶೇ 75% ಮತ್ತು ಅದಕ್ಕಿಂತ ಹೆಚ್ಚು) ಮತ್ತು ಪದವಿ ಸ್ನಾತಕೋತ್ತರ ಪರೀಕ್ಷೆಗಳಲ್ಲಿ (ಶೇ 70% ಮತ್ತು ಅದಕ್ಕಿಂತ ಹೆಚ್ಚು) ಅಂಕಗಳನ್ನುಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ನಮ್ಮ ಬ್ಯಾಂಕಿನ ಮಹಾಸಭೆಯಲ್ಲಿ ಬಹುಮಾನ ನೀಡಿ ಪ್ರತಿಭಾ ಪುರಸ್ಕಾರ ನೀಡಲಾಗುವುದು. (ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆ ತೆರೆಯತಕ್ಕದ್ದು) ಸದಸ್ಯರುಗಳ ಮಕ್ಕಳು ಈ ಪುರಸ್ಕಾರಕ್ಕೆ ಅರ್ಹರಾಗಿದ್ದರೆ ದೃಢೀಕೃತ ಅಂಕಪಟ್ಟಿ ಮತ್ತು ಮಕ್ಕಳ ಭಾವಚಿತ್ರವನ್ನು ಬ್ಯಾಂಕಿನಿಂದ ಪಡೆದ ನಿಗದಿತ ನಮೂನೆಯೊಂದಿಗೆ ಲಗತ್ತಿಸಿ ದಿನಾಂಕ 05–09–2026ರೊಳಗೆ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಯವರಲ್ಲಿ ಹೆಸರು ನೊಂದಾಯಿಸಿಕೊಳ್ಳಲು ಕೋರಲಾಗಿದೆ.

2. ಸದಸ್ಯರುಗಳು ಹಾಜರಿ ಪುಸ್ತಕದಲ್ಲಿ ಸಹಿ ಹಾಕಿ, ಸದಸ್ಯತ್ವದ ಸಂಖ್ಯೆ ಮತ್ತು ವಿಳಾಸ ಬದಲಾವಣೆ ಇದ್ದಲ್ಲಿ ಅದನ್ನು ನಮೂದಿಸತಕ್ಕದ್ದು,

3. ಷೇರು ಹಣ ರೂ.1,000/–ಕ್ಕಿಂತ ಕಡಿಮೆ ಇರುವ ಸದಸ್ಯರುಗಳು ತಮ್ಮ ಷೇರುಗಳನ್ನು ಕಡ್ಡಾಯವಾಗಿ ಕನಿಷ್ಠ ರೂ 1,000/–ಗಳಿಗೆ ಹೆಚ್ಚಿಸಿಕೊಳ್ಳ ಬೇಕೆಂದು ಈ ಮೂಲಕ ಕೋರಲಾಗಿದೆ.

4. ಷೇರು Certificate ಪಡೆಯದೇ ಇರುವ ಸದಸ್ಯರುಗಳು ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ಪಡೆದು ಕೊಳ್ಳಬೇಕಾಗಿ ವಿನಂತಿಸಲಾಗಿದೆ.

5. ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನಿಂದ ಪಡೆದಿರುವ ನಿಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು. ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರುಗಳು ಇತ್ತೀಚಿನ ಭಾವಚಿತ್ರಗಳನ್ನು ಬ್ಯಾಂಕಿಗೆ ಕೊಟ್ಟು ಸಾಮಾನ್ಯ ಸಭೆಯ ದಿನಾಂಕಕ್ಕೆ 2 ದಿನ ಮೊದಲು ಗುರುತಿನ ಚೀಟಿಯನ್ನು ಬ್ಯಾಂಕಿನ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

6. ಸದಸ್ಯರುಗಳು ವಾರ್ಷಿಕ ವರದಿ ಪುಸ್ತಕವನ್ನು ಬ್ಯಾಂಕಿನ ಕೆಲಸದ ವೇಳೆಯಲ್ಲಿ ದಿನಾಂಕ 01–09–2026 ರಿಂದ ಪಡೆದು ಸಭೆಗೆ ಬರುವಾಗ ಜೊತೆಯಲ್ಲಿ ತರಬೇಕಾಗಿ ಕೋರಲಾಗಿದೆ, ಬ್ಯಾಂಕಿಗೆ ಬರಲು ಸಾದ್ಯವಾಗದ ಸದಸ್ಯರು ಬ್ಯಾಂಕಿನ ವೆಬ್ ಸೈಟ್: www.acobl.com ಗೆ ಬೇಟಿ ನೀಡಿ ವಾರ್ಷಿಕ ವರದಿ ಪುಸ್ತಕವನ್ನು download ಮಾಡಿಕೊಳ್ಳತಕ್ಕದ್ದು.

7. ಚರ್ಚೆಗಾಗಿ ಸೂಚಿಸುವ ವಿಷಯಗಳನ್ನು ತಾ॥ 06–09–2026ಕ್ಕೆ ಮುಂಚಿತವಾಗಿ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಲಿಖಿತ ಮುಕೇನ ಕಳುಹಿಸಬೇಕೆಂದು ಕೋರಲಾಗಿದೆ. ಆ ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಚರ್ಚೆಗೆ ಸೂಚಿಸುವ ವಿಷಯಗಳು ಸಹಕಾರಿ ಕಾನೂನು ಮತ್ತು ಬ್ಯಾಂಕಿನ ಉಪ–ನಿಯಮಗಳ ಚೌಕಟ್ಟಿನೊಳಗಿರಬೇಕು..(ಮನವಿ ನೀಡದ ಹೊರತು ಸಭೆಯಲ್ಲಿ ಮಾತನಾಡಲು ಅವಕಾಶವಿರುವುದಿಲ್ಲ)

8. ಬ್ಯಾಂಕಿನ ಸದಸ್ಯರುಗಳು ಉಪ ನಿಬಂಧನೆಗಳಲ್ಲಿ ನಿರ್ಧಿಷ್ಟಪಡಿಸಿದಂತೆ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು (minimum transaction) ಪ್ರತಿ ವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕಿರುವುದಿಲ್ಲ. ಆದ್ದರಿಂದ ಸದಸ್ಯರು ಕಡ್ಡಾಯವಾಗಿ ಉಳಿತಾಯ ಖಾತೆ ತೆರೆಯತಕ್ಕದ್ದು.

9. ಸುಸ್ತಿದಾರರು ಬಾಕಿ ಇರುವ ಸಾಲವನ್ನು ಸಕಾಲದಲ್ಲಿ ಪಾವತಿಮಾಡಿ ಬ್ಯಾಂಕಿನ ಪ್ರಗತಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

10. ಸುಸ್ತಿದಾರರಾಗಿರುವ ಸದಸ್ಯರುಗಳು ತಮ್ಮ ಸಾಲದ ಕಂತು ಮತ್ತು ಬಡ್ಡಿಯನ್ನು ಸಾಮಾನ್ಯ ಸಭೆ ನಡೆಯುವ ಮುನ್ನ 20 ದಿನಗಳೊಳಗಾಗಿ ಪಾವತಿ ಮಾಡಲು ತಪ್ಪಿದಲ್ಲಿ, ಅವರಿಗೆ ಸಹಕಾರ ಸಂಘಗಳ ಕಾನೂನು 20(2) ಎ ಪ್ರಕಾರ ಸಭೆಯ ನಿರ್ಣಯದಲ್ಲಿ ಮತ ನೀಡಲು ಅವಕಾಶವಿರುವುದಿಲ್ಲ.

11. ಸದಸ್ಯರು ಬ್ಯಾಂಕಿನ ಲೆಕ್ಕಪತ್ರಗಳ ಬಗ್ಗೆ ಮಾತ್ರ ಚರ್ಚಿಸಬೇಕು ಬೇರೆ ಯಾವುದೇ ಅನಾವಶ್ಯಕ ಚರ್ಚೆಗೆ ಅವಕಾಶ ಇರುವುದಿಲ್ಲ.

12. ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ಊಟದ ವ್ಯವಸ್ಥೆಯನ್ನು ಬೆಳಗ್ಗೆ 10.30 ಘಂಟೆಯಿಂದ ಏರ್ಪಡಿಸಲಾಗಿದೆ.

13. ನಿಯಮ 27A (ಎ)(ಬಿ)ರಂತೆ 5 ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕನಿಷ್ಠ 2 ಸಭೆಗೆ ಹಾಜಾರಾಗದಿದ್ದರೆ ಹಾಗೂ ಬ್ಯಾಂಕಿನ 5 ಸಹಕಾರಿ ವರ್ಷಗಳಲ್ಲಿ 2 ವರ್ಷದಲ್ಲಿ ಕನಿಷ್ಠ ವ್ಯವಹಾರ ಮಾಡದ ಸದಸ್ಯರಿಗೆ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಇರುವುದಿಲ್ಲ.

14. ಸದಸ್ಯರು RBI ನಿಯಮಾವಳಿಯಂತೆ ತಮ್ಮ ಇತ್ತೀಚಿನ KYC ಧಾಖಲೆಗಳನ್ನು ನೀಡಿ update ಮಾಡುವುದು.

15. ಬ್ಯಾಂಕಿನ ಸದಸ್ಯರು ಯಾರು ಉಳಿತಾಯ ಖಾತೆ ತೆರೆದಿರುವುದಿಲ್ಲ ಅಂತಹ ಸದಸ್ಯರು ಖಡ್ಡಾಯವಾಗಿ ಉಳಿತಾಯ ಖಾತೆ ತೆರೆಯುವುದು.

ತೆರೆದ ಅಂಚೆ

ಶ್ರೀ / ಶ್ರೀಮತಿ

ಇಂದ:

**ಆನಂದ ಕೋ–ಆಪರೇಟಿವ್ ಬ್ಯಾಂಕ್ ಲಿ.**

ನಂ.116, 1ನೇ ಮಹಡಿ, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020
ಫೋನ್: 23447829, 23501843, 23658484
e-mail: anandacb_1979@yahoo.com, headoffice@acobl.com
www.acobl.com